ವಿಷಯ : ದ. ಕನ್ನಡ ಜಿಲ್ಲೆಯಲ್ಲಿ ಇ.ಪಿ.ಐ. ಪಾರ್ಕ್‌ಮಾಡುವ ಪ್ರಸ್ತಾವ

1476 (1931)-ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇ.ಪಿ.ಐ. ಪಾರ್ಕ್ ಮಾಡುವ ಪ್ರಸ್ತಾವ ಸರ್ಕಾರದವರ ಪರಿಶೀಲನೆಯಲ್ಲಿದೆಯೇ

ಆ) ಹಾಗಿದ್ದಲ್ಲಿ ಕುಳಾಯಿ ಮತ್ತು ತೋಕೂರು ಗ್ರಾಮದಲ್ಲಿ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಈ ಬಗ್ಗೆ ಕಾಮಗಾರಿ ಪ್ರಾರಂಭಿಸಲಾಗಿದೆಯೇ ಹಾಗಿದ್ದಲ್ಲಿ ಈ ಕಾಮಗಾರಿ ಯಾವ ಹಂತದಲ್ಲಿದೆ ಇಲ್ಲದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು (ವಿವರ ನೀಡುವುದು)?

ಶ್ರೀ ಬಿ. ಎ. ಮೋಯ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಅ) ಹೌದು, ಭಾರತ ಸರ್ಕಾರದ ಮಂಜೂರಾತಿ ಇನ್ನು ದೊರಕಬೇಕಾಗಿದೆ.

ಆ) ಈ ಗ್ರಾಮಗಳಲ್ಲಿ ಇದುವರೆವಿಗೂ ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ. ಭೂ ಸ್ವಾಧೀನದ ಪ್ರಕರಣಗಳು ವಿವಿಧ ಹಂತಗಳಲ್ಲಿವೆ.

ಇ) ಇನ್ನೂ ಇಲ್ಲ, ಭೂ ಸ್ವಾಧೀನದ ಕೆಲಸವು ಮುಗಿದ ನಂತರ ಕ್ರಮ ಕೈಗೊಳ್ಳಲಾಗುವುದು.